ಫ್ಯಾಕ್ಸ್/Fax : 080-25586321
ಈಮೇಲ್/E-mail : ho@kspcb.gov.in
ವೆಬ್‌ಸೈಟ್/Website : http://kspcb.gov.in

25581383, 25589112
25588151, 25588270
25588142, 25586520

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
Karnataka State Pollution Control Board
"ಪರಿಸರ ಭವನ", 1 ರಿಂದ 5ನೇ ಮಹಡಿಗಳು, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

ಸಂಖ್ಯೆ:ಮಾನಿಮಂ/21/ಜಾ.ಕೋ/2017-18/ 609 ದಿನಾಂಕ: 25 JUN 2018

**ದಿನಾಂಕ: 29-05-2018ರಂದು 3ನೇ ಮಹಡಿ, ಸಭೆಯ ಸಭಾಂಗಣ, ಪರಿಸರ ಭವನ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರಿನಲ್ಲಿ, ನಡೆದ 18ನೇ ಜಾಗೃತಿ ಸಮಿತಿಯ ಸಭೆಯ ನಡವಳಿ.**

| | |
|---|---|
| **ಅಧ್ಯಕ್ಷತೆ:** ಶ್ರೀ ಪಿಯುಸ್.ಎಲ್. ರೋಡ್ರಿಗಸ್. | – ಅಧ್ಯಕ್ಷರು |
| **ಉಪಸ್ಥಿತ ಸದಸ್ಯರು:** | |
| 1. ಶ್ರೀ ಎಂ. ವೆಂಕಟರಾಮ (ಮಂಡಳಿ ಸದಸ್ಯರು) | – ಸದಸ್ಯರು |
| **ಆಹ್ವಾನಿತರು**<br>1. ನಾಗೇಶ ಹೆಗಡೆ<br>2. ಡಾ. ಲಕ್ಷ್ಮೀಕಾಂತ್. ಹೆಚ್.ಎಂ.<br>3. ಡಾ. ಶಾರದ ಬಿ. ಕುಣ್ಣೂರ್<br>4. ಡಾ. ಟಿ.ಎಸ್. ವಿವೇಕಾನಂದ<br>5. ಕೆ. ವಿಠ್ಠಲ್ ಶೆಟ್ಟಿ<br>6. ಶ್ರೀ ಟಿ. ರವೀಂದ್ರ ಪಾಟೀಲ್. | – ಆಹ್ವಾನಿತರು |
| **ಗೈರು ಹಾಜರಾದ ಆಹ್ವಾನಿತರು**<br>1. ಡಾ. ಕೇಶವ್ ಎ. ಬುಲ್‌ಬುಲೆ<br>2. ಶ್ರೀಮತಿ ಸುಮಂಗಳ ಎಸ್. ಮಮ್ಮಿಗಟ್ಟಿ<br>3. ಡಾ. ರಮೇಶ್ ಕಾಮತ್.<br>4. ಶ್ರೀ ಚಿದಾನಂದ ಮಠದ್ | – |
| **ಸಭೆಯ ಸಂಚಾಲಕರು:**<br>ಶ್ರೀ ಪ್ರಭುದೇವ್,<br>ಹಿ.ಪ.ಅ. ತರಬೇತಿ ಮತ್ತು ಜಾಗೃತಿ ಕೋಶ | |
| **ಉಪಸ್ಥಿತ ಅಧಿಕಾರಿಗಳು:**<br>1) ಶ್ರೀಮತಿ ರೂಪಾ. ಸಿ., ಸಾ.ಸಂ.ಅ., ಕ.ರಾ.ಮಾ.ನಿ.ಮಂ. | |

-----

ಸಂಚಾಲಕರು ಜಾಗೃತಿ ಸಮಿತಿಯ ಅಧ್ಯಕ್ಷರನ್ನು, ಸದಸ್ಯರುಗಳನ್ನು ಮತ್ತು ಆಹ್ವಾನಿತರನ್ನು 18ನೇ ಜಾಗೃತಿ ಸಮಿತಿಯ ಸಭೆಗೆ ಸ್ವಾಗತಿಸಿದರು, 18ನೇ ಸಭೆಗೆ ಸಂಸ್ಥೆಗಳು ಸಲ್ಲಿಸಿದ ಪರಿಸರ ಜಾಗೃತಿಗೆ ಸಂಬಂಧಿಸಿದಂತೆ ಮಂಡಳಿ ಮಾನ್ಯ ಅಧ್ಯಕ್ಷರು/ಸದಸ್ಯ ಕಾರ್ಯದರ್ಶಿಗಳು ಸೂಚಿಸಿದ ಪ್ರಸ್ತಾವನೆಗಳನ್ನು ಮತ್ತು ಜಾಗೃತಿ ಸಮಿತಿ ಅಧ್ಯಕ್ಷರು ಸೂಚಿಸಿದ ಇತರೆ ಕಾರ್ಯಸೂಚಿಯ ವಿಷಯಗಳನ್ನು ಸಮಿತಿ ಮುಂದೆ ವಿವರಿಸಿದರು.

**ಅಧ್ಯಕ್ಷರು, ಜಾಗೃತಿ ಸಮಿತಿ, ಕೆಳಕಂಡ ವಿಷಯಗಳನ್ನು ಚರ್ಚಿಸಿ ಸೂಕ್ತ ಶಿಫಾರಸುಗಳನ್ನು ನೀಡಿದರು.**


"ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ"
AVOID USE OF PLASTICS-BE 'ECO' FRIENDLY

# ಪ್ರಾಯೋಜಕತ್ವ ಮತ್ತು ಕಾರ್ಯಾಗಾರ ಕಾರ್ಯಕ್ರಮಗಳು

| ವಿ.ಸ. | ವಿಷಯ | ಪ್ರಾಯೋಜಕತ್ವ | ಜಾಗೃತಿ ಸಮಿತಿಯ ಶಿಫಾರಸ್ಸುಗಳು |
|---|---|---|---|
| 18.1 | **ಮಲ್ಟಿ ಸ್ಕಿಲ್ಸ್ ಟ್ರೈನಿಂಗ್ ಅಂಡ್ ಇಂಟರ್‌ಡಿಸಿಪ್ಲೈನರಿ ರೀಸರ್ಚ್ ಇನ್ಸಿಟ್ಯೂಟ್, #932, 1ನೇ ಮುಖ್ಯ ರಸ್ತೆ, 1ನೇ ಕ್ರಾಸ್, ಉಲ್ಲಾಳ ಮುಖ್ಯ ರಸ್ತೆ, ಜ್ಞಾನಜ್ಯೋತಿನಗರ, ಬೆಂಗಳೂರು– 560056**<br>ಸದರಿಯವರು ರಾಜ್ಯದ ವಿವಿಧ ಶಿಕ್ಷಣ ಸಂಸ್ಥೆಗಳ ಜೊತೆಗೂಡಿ ವಿವಿಧ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿ ಸಮುದಾಯಗಳಲ್ಲಿ ನೀರಿನ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸುವ ಚಟುವಟಿಕೆ ಆಧಾರಿತ ಸರಣಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಸದರಿ ಕಾರ್ಯಕ್ರಮದಲ್ಲಿ 10 ಅಧಿವೇಶನಗಳನ್ನು ನಡೆಸುತ್ತಿದ್ದು, ತಲಾ ಒಂದು ಅಧಿವೇಶನಕ್ಕೆ ರೂ. 10,000/– ಗಳಂತೆ ಒಟ್ಟು ರೂ. 1,00,000/– ಗಳು ವೆಚ್ಚವಾಗಲಿದ್ದು, ಮಂಡಳಿಯಿಂದ ಪ್ರಾಯೋಜಕತ್ವ ನೀಡುವಂತೆ ಕೋರಿರುತ್ತಾರೆ. | ತಲಾ ಒಂದು ಅಧಿವೇಶನಕ್ಕೆ ರೂ. 10,000/– ಗಳಂತೆ 10 ಅಧಿವೇಶನಕ್ಕೆ ಒಟ್ಟು ರೂ. 1,00,000/– ಗಳು. | ಸಮಿತಿಯು ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |
| 18.2 | **ಗದಗ ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘ, ಗದಗ (ಜಿಲ್ಲಾ ಘಟಕ),**<br>ಸದರಿಯವರು ಸಂಘದ ವತಿಯಿಂದ ಗದಗ ಜಿಲ್ಲೆಯಲ್ಲಿ ವಿಶ್ವದಾಖಲೆ ನಿರ್ಮಾಣದ ಹತ್ತು ಸಾವಿರ ಮಕ್ಕಳನ್ನು ಒಂದೆಡೆ ಸೇರಿಸಿ ಪರಿಸರ ಜಾಗೃತಿ ಮೂಡಿಸುವ ಬೃಹತ್ ಚಿತ್ರಕಲಾ ಶಿಬಿರ 'ಚಿಣ್ಣರ ಚಿತ್ರ ಚಿತ್ತಾರ' ಎಂಬ ಕಾರ್ಯಕ್ರಮವನ್ನು ಫೆಬ್ರವರಿ ತಿಂಗಳಿನಲ್ಲಿ ಹಮ್ಮಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಸದರಿ ಕಾರ್ಯಕ್ರಮಕ್ಕೆ ಒಟ್ಟು ರೂ. 28,62,500/– ಗಳು ವೆಚ್ಚವಾಗಲಿದ್ದು, ಮಂಡಳಿಯಿಂದ ಧನಸಹಾಯ ನೀಡುವಂತೆ ಕೋರಿರುತ್ತಾರೆ. | ಒಟ್ಟು ರೂ. 28,62,500/– | ಸಮಿತಿಯು ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |
| 18.3 | **ವಾತ್ಸಲ್ಯ ಅರ್ಬನ್ ಮತ್ತು ರೂರಲ್ ಡೆವಲಪ್‌ಮೆಂಟ್ ಚಾರಿಟಬಲ್ ಟ್ರಸ್ಟ್ (ರಿ.), ಜನತಾ ಕಾಲೋನಿ, ಅಬ್ಬಾಳಗೆರೆ, ಶಿವಮೊಗ್ಗ.**<br>ಸದರಿ ಟ್ರಸ್ಟ್ ವತಿಯಿಂದ ಶಿವಮೊಗ್ಗ ಜಿಲ್ಲೆ ವ್ಯಾಪ್ತಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ, ಗ್ರಾಮ ಪಂಚಾಯಿತಿ ಚುನಾಯಿತ ಕಾರ್ಯಕರ್ತೆಯರಿಗೆ, ಗ್ರಾಮ ಪಂಚಾಯಿತಿ ಚುನಾಯಿತ ಜನಪ್ರತಿನಿಧಿಗಳಿಗೆ, ಆಶಾ ಕಾರ್ಯಕರ್ತೆಯರಿಗೆ, ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕವಾಗಿ ಶಿವಮೊಗ್ಗ ಜಿಲ್ಲೆಯ 7 ತಾಲ್ಲೂಕುಗಳಲ್ಲಿ ತಲಾ 8 ಕಾರ್ಯಾಗಾರದಂತೆ ಆಯಾ ತಾಲ್ಲೂಕು ಕೇಂದ್ರಗಳಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಹಯೋಗದೊಂದಿಗೆ ಗಿಡಗಳನ್ನು ನೆಡುವುದರಿಂದ ಆಗುವ ಉಪಯೋಗ, ಕಾಡುಗಳನ್ನು ನಾಶ ಮಾಡುವುದರಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ವಾಯು ಮಾಲಿನ್ಯದಿಂದ ಆಗುವಂತಹ ತೊಂದರೆಗಳ ಬಗ್ಗೆ ಅರಿವು ಮೂಡಿಸುವುದರ ಬಗ್ಗೆ ಕಾರ್ಯಾಗಾರಗಳನ್ನು ನಡೆಸಲು ಉದ್ದೇಶಿಸಿದ್ದು, ಈ ಕಾರ್ಯಾಗಾರಕ್ಕೆ ಮಂಡಳಿ ವತಿಯಿಂದ ಸಹಾಯನುದಾನವನ್ನು ಕೋರಿ ಮನವಿ ಸಲ್ಲಿಸಿದ್ದಾರೆ.<br>**(ಸದರಿ ಸಂಸ್ಥೆಗೆ ಜಾಗೃತಿ ಕಾರ್ಯಕ್ರಮಗಳಿಗೆ 17ನೇ ಜಾಗೃತಿ ಸಮಿತಿ ಸಭೆಯಲ್ಲಿ ರೂ. 15000/– ಗಳನ್ನು ಮಂಜೂರು ಮಾಡಲಾಗಿರುತ್ತದೆ)** | ತಲಾ ಒಂದು ಕಾರ್ಯಾಗಾರಕ್ಕೆ ರೂ. 50,000/– ಗಳಂತೆ 56 ಕಾರ್ಯಾಗಾರಗಳಿಗೆ ಒಟ್ಟು ರೂ. 28,00,000/– ಗಳು | ಸಮಿತಿಯು ವಾತ್ಸಲ್ಯ ಅರ್ಬನ್ ಮತ್ತು ರೂರಲ್ ಡೆವಲಪ್‌ಮೆಂಟ್ ಚಾರಿಟಬಲ್ ಟ್ರಸ್ಟ್ (ರಿ.), ವತಿಯಿಂದ ಹಮ್ಮಿಕೊಂಡಿರುವ ಜಾಗೃತಿ ಕಾರ್ಯಾಗಾರಕ್ಕೆ ರೂ. 15,000/– ಗಳನ್ನು ನೀಡಲು ಶಿಫಾರಸ್ಸು ಮಾಡಿತು. |
| 18.4 | **ಯಕ್ಷ ಕಲಾ ಲೋಕ ಟ್ರಸ್ಟ್ (ರಿ), ನಂ. 52, 4ನೇ ಕ್ರಾಸ್, ಅಶೋಕ ನಗರ, ಬಿಎಸ್‌ಕೆ 1ನೇ ಹಂತ, ಬೆಂಗಳೂರು– 560050.**<br>ಸದರಿ ಸಂಸ್ಥೆ ವತಿಯಿಂದ ಪರಿಸರ ಮತ್ತು ಪರಿಸರದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಅಗತ್ಯ ಜಾಗೃತಿ ಮೂಡಿಸಲು ಯಕ್ಷಗಾನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಸದರಿ ಕಾರ್ಯಕ್ರಮಕ್ಕೆ ಒಟ್ಟು ರೂ. 3,62,00/– ಗಳು ವೆಚ್ಚವಾಗಲಿದ್ದು, ಮಂಡಳಿ ವತಿಯಿಂದ ಧನ ಸಹಾಯವನ್ನು ಕೋರಿ ಮನವಿ ಸಲ್ಲಿಸಿದ್ದಾರೆ. | ಒಟ್ಟು ರೂ. 3,62,00/– ಗಳು | ಸಮಿತಿಯು ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |
| 18.5 | **38ನೇ ನ್ಯಾಷನಲ್ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್, ಜೆ. ಆನಂದ ಸೋನ್ಸ್, ಡಿಕೆಎಂಎಎ, ನಂ. 4–5–515, ಮಿಷನ್ ಕಾಂಪೌಂಡ್, ಜೈಲ್ ರೋಡ್, ಮಂಗಳೂರು –575003**<br>ಸದರಿಯವರು ರಾಷ್ಟ್ರೀಯ ಹಿರಿಯರ ಅಥ್ಲೆಟಿಕ್ ಅಸೋಸಿಯೇಷನ್‌ರವರು 38ನೇ ರಾಷ್ಟ್ರೀಯ ಹಿರಿಯರ ಕ್ರೀಡಾ ಕೂಟವನ್ನು ಮಂಗಳೂರಿನ ಮಂಗಳಾ | ಒಟ್ಟು ಅಂದಾಜು ರೂ. 38,00,000/– ಗಳು | ಸಮಿತಿಯು ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |

| | | | |
|---|---|---|---|
| | ಕ್ರೀಡಾಂಗಣದಲ್ಲಿ 2018ನೇ ಏಪ್ರಿಲ್ 12 ರಿಂದ 15ರವರೆಗೆ ನಡೆಸಲು ಭಾರತ ಸರ್ಕಾರದಿಂದ ಮಾನ್ಯತೆ ಪಡೆದುಕೊಂಡಿರುತ್ತಾರೆ.<br>ಸದರಿ ಕ್ರೀಡಾಕೂಟದಲ್ಲಿ ಸುಮಾರು 1500ಕ್ಕಿಂತಲೂ ಮಿಗಿಲಾಗಿ ಭಾರತದ ಪ್ರತಿಯೊಂದು ರಾಜ್ಯಗಳಿಂದ 30 ರಿಂದ 85ರವರೆಗಿನ ವಯೋಮಿತಿಯವರು ಹಾಗೂ ಸುಮಾರು 150 ಅಧಿಕಾರಿ ವರ್ಗದವರು (ರಾಷ್ಟ್ರೀಯ) ಹಾಗೂ ಇತರ ಸಿಬ್ಬಂದಿ ವರ್ಗದವರು ಭಾಗವಹಿಸಲಿದ್ದಾರೆ. ಈ ಕ್ರೀಡಾಕೂಟವನ್ನು ಯಶಸ್ವಿಗೊಳಿಸಲು ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಗಿದ್ದು, ಒಟ್ಟು ಅಂದಾಜು ರೂ. 38,00,000/- ಗಳು ವೆಚ್ಚವಾಗಲಿದ್ದು, ಮಂಡಳಿ ವತಿಯಿಂದ ಧನ ಸಹಾಯವನ್ನು ಕೋರಿ ಮನವಿ ಸಲ್ಲಿಸಿದ್ದಾರೆ. | | |
| 18.6 | **ನಿಸರ್ಗ ಫೌಂಡೇಶನ್ (ರಿ) ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ -577526**<br>ಸದರಿ ಸಂಸ್ಥೆಯವರು ದಾವಣಗೆರೆ ಜಿಲ್ಲೆಯ ದಾವಣಗೆರೆ, ಹರಿಹರ ಮತ್ತು ಚನ್ನಗಿರಿ ನಗರಗಳಲ್ಲಿ ಪರಿಸರ ಜಾಗೃತಿ ಶಿಬಿರಗಳನ್ನು ನಡೆಸಲು ಉದ್ದೇಶಿಸಿದ್ದು, ಇದರ ಪ್ರಸ್ತಾವನೆಯ ಯೋಜನಾ ವರದಿಯನ್ನು ದಾವಣಗೆರೆ ಪ್ರಾದೇಶಿಕ ಕಛೇರಿಗೆ ಸಲ್ಲಿಸಿದ್ದಾರೆ. ಈ ಕಾರ್ಯಕ್ರಮಕ್ಕೆ ಮಂಡಳಿಯಿಂದ ಆರ್ಥಿಕ ಸಹಾಯ ಮಾಡಲು ಕೋರಿರುತ್ತಾರೆ. ಸದರಿ ಕಾರ್ಯಕ್ರಮದಲ್ಲಿ ನಗರದ ಪದವಿ ಪೂರ್ವ ಹಾಗೂ ಪ್ರಥಮ ದರ್ಜೆ ಕಾಲೇಜು ಯುವಕ ಮತ್ತು ಯುವತಿಯರಿಗೆ ಹಾಗೂ ಸಹಕಾರಿ, ಸ್ವಯಂ ಸೇವಾ ಸಂಸ್ಥೆಯ ಪದಾಧಿಕಾರಿಗಳಿಗೆ, ಸಾರ್ವಜನಿಕರಿಗೆ ಹಿರಿಯ ಪರಿಸರ ತಜ್ಞರು ಸಂಪನ್ಮೂಲ ವ್ಯಕ್ತಿಗಳು ಹಾಗೂ ಪರಿಸರ ಅಧಿಕಾರಿಗಳಿಂದ ಪರಿಸರ ಪ್ರಜ್ಞೆ ಮೂಡಿಸಲಾಗುವುದು. ನಗರ ಹಾಗೂ ಪಟ್ಟಣ ಮತ್ತು ಗ್ರಾಮಗಳಲ್ಲಿ ಪರಿಸರ ಸ್ವಚ್ಛತೆ ಗಿಡ ಮರ ಬೆಳೆಸುವುದು ಶೌಚಾಲಯ ಬಳಕೆ ಪ್ಲಾಸ್ಟಿಕ್ ನಿಷೇಧ, ಶುದ್ಧ ಕುಡಿಯುವ ನೀರಿನ ಬಳಕೆ ಮುಂತಾದವುಗಳ ಬಗ್ಗೆ ಅರಿವು ಮೂಡಿಸಲಾಗುವುದಾಗಿ ತಮ್ಮ ಪತ್ರದಲ್ಲಿ ತಿಳಿಸಿರುತ್ತಾರೆ. ಸದರಿಯವರ ಮನವಿಯನ್ನು ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ದಾವಣಗೆರೆ ರವರು ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.<br>(ಕಾರ್ಯಕ್ರಮಕ್ಕೆ ತಗಲುವ ವೆಚ್ಚ ರೂ. 99,200/-) | ಕಾರ್ಯಕ್ರಮಕ್ಕೆ ತಗಲುವ ವೆಚ್ಚ ರೂ 99,200/-) | ಸಮಿತಿಯು ನಿಸರ್ಗ ಫೌಂಡೇಶನ್ (ರಿ) ಹೊಳಲ್ಕೆರೆ, ವತಿಯಿಂದ ಹಮ್ಮಿಕೊಂಡಿರುವ ಪರಿಸರ ಜಾಗೃತಿ ಕಾರ್ಯಕ್ರಮಕ್ಕೆ ರೂ. 50,000/- ಗಳನ್ನು ನೀಡಲು ಶಿಫಾರಸ್ಸು ಮಾಡಿತು. |
| 18.7 | **ಕಾಗಾಸ್ ಫೌಂಡೇಶನ್, ನಂ. 227, 31ನೇ ಮೈನ್, 7ನೇ ಕ್ರಾಸ್, ಸೆಕ್ಟರ್-1, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು**<br>ಸದರಿಯವರು ಸಂಸ್ಥೆ ವತಿಯಿಂದ ವಿಶ್ವ ಪರಿಸರ ದಿನದ ಪ್ರಯುಕ್ತ ದಿನಾಂಕ: 09.06.2018 ರಂದು ಬೆಂಗಳೂರಿನ ಆಗ್ರಾ ಕೆರೆ ಇಲ್ಲಿ "ಕೆರೆ ಉತ್ಸವ" ಎಂಬ ಶೀರ್ಷಿಕೆಯಡಿ ಪ್ಲಾಸ್ಟಿಕ್ ಬಳಕೆಯಿಂದ ನಮ್ಮ ಪರಿಸರ ಮತ್ತು ಜಲಕಾಯಗಳ ಮೇಲಾಗುವ ದುಷ್ಪರಿಣಾಮಗಳ ಹಾಗೂ ಪ್ಲಾಸ್ಟಿಕ್ ವಸ್ತುಗಳ ಪರ್ಯಾಯವಾಗಿ ಇಕೋ-ಫ್ರೆಂಡ್ಲಿ ವಸ್ತುಗಳ ಬಳಕೆಯ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮಕ್ಕೆ ಮಂಡಳಿಯಿಂದ ಆರ್ಥಿಕ ಸಹಾಯವನ್ನು ಕೋರಿ ಮನವಿ ಸಲ್ಲಿಸಿದ್ದಾರೆ. | ಆರ್ಥಿಕ ಸಹಾಯ | ಸಮಿತಿಯು ಕಾಗಾಸ್ ಫೌಂಡೇಶನ್, ಬೆಂಗಳೂರು ವತಿಯಿಂದ ಹಮ್ಮಿಕೊಂಡಿರುವ ಕೆರೆ ಉತ್ಸವ ಕಾರ್ಯಕ್ರಮಕ್ಕೆ ರೂ. 15,000/- ಗಳನ್ನು ನೀಡಲು ಶಿಫಾರಸ್ಸು ಮಾಡಿತು. |
| 18.8 | **Centre for Environment Education, Southern Regional Cell, No. 76/8, Jharakbande Kaval, P.B. No. 6404, Subedarpalya, Attur Post, Yelahanka, Bangalore.**<br>ಸದರಿಯವರು ಸಂಸ್ಥೆ ವತಿಯಿಂದ ವಿಶ್ವ ಪರಿಸರ ದಿನ 2018ರ ಪ್ರಯುಕ್ತ ಶಾಲಾ ಮಕ್ಕಳಿಗಾಗಿ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವುದು, ಪ್ಲಾಸ್ಟಿಕ್ ಮರುಬಳಕೆ ಹಾಗೂ ಪ್ಲಾಸ್ಟಿಕ್ ಪುನರ್ಬಳಕೆಯ ವಿಷಯಗಳನ್ನೊಳಗೊಂಡ ಟೂಲ್ ಕಿಟ್‌ನ್ನು ತಯಾರಿಸಿ 1000 ಶಾಲೆಗಳಿಗೆ ವಿತರಿಸಲು ಒಟ್ಟು ರೂ. 2.00 ಲಕ್ಷಗಳು ವೆಚ್ಚವಾಗುವುದಾಗಿ ತಿಳಿಸಿದ್ದು, ಈ ಕಾರ್ಯಕ್ರಮಕ್ಕೆ ಮಂಡಳಿಯ ಲೋಗೋವನ್ನು ಬಳಸಲು ಮಂಡಳಿಯಿಂದ ಅನುಮತಿ ಹಾಗೂ ಆರ್ಥಿಕ ಸಹಾಯವನ್ನು ಕೋರಿ ಮನವಿ ಸಲ್ಲಿಸಿದ್ದಾರೆ. | ಒಟ್ಟು ರೂ. 2,00,000/- ಗಳು | ಸಮಿತಿಯು Centre for Environment Education, ವತಿಯಿಂದ ಹಮ್ಮಿಕೊಂಡಿರುವ ಪರಿಸರ ಜಾಗೃತಿ ಕಾರ್ಯಕ್ರಮಕ್ಕೆ ರೂ. 1,00,000/- ಗಳನ್ನು ನೀಡಲು ಶಿಫಾರಸ್ಸು ಮಾಡಿತು. |

| | | | |
|---|---|---|---|
| 18.9 | **ಸಮರ್ಪಣ, ಸಮಾಜ ಸ್ಪಂದನ ಸಂಘ, 7–ಬಿ, 19ನೇ 'ಸಿ' ಮುಖ್ಯ ರಸ್ತೆ, 1ನೇ ವಿಭಾಗ, ರಾಜಾಜಿನಗರ, ಬೆಂಗಳೂರು–560010**<br>ಸದರಿರವರು ತಮ್ಮ ಪತ್ರದಲ್ಲಿ ತಿಳಿಸಿರುವಂತೆ 5000 ಕ್ಕೂ ಹೆಚ್ಚು ಶುದ್ಧ ಜೇಡಿ ಮಣ್ಣಿನ ಗಣಪ ತಯಾರಿಸಿ, ಜೇಡಿಮಣ್ಣಿನ ಗಣಪತಿಯನ್ನು ಕೊಳ್ಳುವ ಗ್ರಾಹಕರಿಗೆ ನಿಗದಿ ಪಡಿಸಿದ ದರದಲ್ಲಿ ರೂ. 50/– ಗಳ ವಿಶೇಷ ರಿಯಾಯಿತಿಯನ್ನು ನೀಡುವುದಾಗಿ ತಿಳಿಸಿರುತ್ತಾರೆ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ 1000 ಗಣಪತಿಗಳನ್ನು ರಿಯಾಯಿತಿ ದರದಲ್ಲಿ ನೀಡುವುದಾಗಿ ತಿಳಿಸಿದ್ದು, ಸದರಿ ರಿಯಾಯಿತಿ ಮೊತ್ತ ರೂ. 50,000/– ಗಳ ಸಹಾಯ ಧನವನ್ನು ಮಂಡಳಿಯಿಂದ ನೀಡುವಂತೆ ಕೋರಿ ಮನವಿ ಸಲ್ಲಿಸಿದ್ದಾರೆ. | ಒಟ್ಟು ರೂ. 50,000/– | ಸಮಿತಿಯು ಸಮರ್ಪಣ, ಸಮಾಜ ಸ್ಪಂದನ ಸಂಘ, ಬೆಂಗಳೂರು ವತಿಯಿಂದ ಹಮ್ಮಿಕೊಂಡಿರುವ ಕೆರೆ ಉತ್ಸವ ಕಾರ್ಯಕ್ರಮಕ್ಕೆ ರೂ. 15,000/– ಗಳನ್ನು ನೀಡಲು ಶಿಫಾರಸ್ಸು ಮಾಡಿತು. |
| 18.10 | **ಪ್ರಜ್ವಲ ಕರ್ನಾಟಕ ಸೋಶಿಯಲ್ ವೆಲ್‌ಫೇರ್ ಟ್ರಸ್ಟ್, #26/375, 11ನೇ ಕ್ರಾಸ್, ನೆಕ್ಸ್ಟ್ ಕಾಫಿ ಬೋರ್ಡ್ ಲೇಔಟ್, ಎಚ್.ಎ.ಎಫ್ ಪೋಸ್ಟ್, ಬೆಂಗಳೂರು–560024**<br>ಸದರಿಯವರು ರಾಜ್ಯದ ವಿವಿಧ ಸಂಸ್ಥೆಗಳ ಜೊತೆಗೂಡಿ ದಕ್ಷಿಣ ಕನ್ನಡದ ವಿವಿಧ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿ ಸಮುದಾಯಗಳಲ್ಲಿ ನೀರಿನ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸುವ ಚಟುವಟಿಕೆ ಆಧಾರಿತ ಸರಣಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಸದರಿ ಕಾರ್ಯಕ್ರಮದಲ್ಲಿ 25 ಅಧಿವೇಶನಗಳನ್ನು ನಡೆಸುತ್ತಿದ್ದು, ತಲಾ ಒಂದು ಅಧಿವೇಶನಕ್ಕೆ ರೂ. 4,700/– ಗಳಂತೆ ಒಟ್ಟು ರೂ. 1,17,500/– ಗಳು ವೆಚ್ಚವಾಗಲಿದ್ದು, ಮಂಡಳಿಯಿಂದ ಪ್ರಾಯೋಜಕತ್ವ ನೀಡುವಂತೆ ಕೋರಿರುತ್ತಾರೆ. | ತಲಾ ಒಂದು ಅಧಿವೇಶನಕ್ಕೆ ರೂ. 4,700/– ಗಳಂತೆ 25 ಅಧಿವೇಶನಕ್ಕೆ ಒಟ್ಟು ರೂ. 1,17,500/– ಗಳು. | ಸಮಿತಿಯು ಪ್ರಜ್ವಲ ಕರ್ನಾಟಕ ಸೋಶಿಯಲ್ ವೆಲ್‌ಫೇರ್ ಟ್ರಸ್ಟ್, ಬೆಂಗಳೂರು ವತಿಯಿಂದ ಹಮ್ಮಿಕೊಂಡಿರುವ ನೀರಿನ ಸಂರಕ್ಷಣಾ ಸರಣಿ ಕಾರ್ಯಕ್ರಮಕ್ಕೆ ರೂ. 95,000/– ಗಳನ್ನು ನೀಡಲು ಶಿಫಾರಸ್ಸು ಮಾಡಿತು. |

## ಜಾಹೀರಾತು ಕಾರ್ಯಕ್ರಮಗಳು

| ವಿ.ಸ. | ವಿಷಯ | ಪ್ರಾಯೋಜಕತ್ವ | ಶಿಫಾರಸ್ಸು |
|---|---|---|---|
| 18.11 | **ಲೋಕಾಯುಕ್ತ ದಾಳಿ, ಕನ್ನಡ ವಾರ ಪತ್ರಿಕೆ, ನಂ. 35, 1ನೇ ಮುಖ್ಯ ರಸ್ತೆ, 1ನೇ ಅಡ್ಡರಸ್ತೆ, ಟಿ. ದಾಸರಹಳ್ಳಿ ಅಂಚೆ, ಮಲ್ಲಸಂದ್ರ, ಬೆಂಗಳೂರು –57.**<br>ಸದರಿಯವರು ತಮ್ಮ ಪತ್ರಿಕೆಗೆ ಮಂಡಳಿಯಿಂದ ಜಾಹೀರಾತನ್ನು ಕೋರಿ ಮನವಿ ಸಲ್ಲಿಸಿದ್ದಾರೆ. | ಜಾಹೀರಾತಿನ ದರ: ರಕ್ಷಾ ಪುಟ ಬಹುವರ್ಣ ರೂ. 75,000/–, ರಕ್ಷಾ ಒಳಪುಟ ಬಹುವರ್ಣ ರೂ. 70,000/–, ಪೂರ್ಣ ಪುಟ ಬಹುವರ್ಣ ರೂ. 60,000/–, ಪೂರ್ಣ ಪುಟ ಕಪ್ಪು ಬಿಳುಪು ರೂ. 50,000/–. | ಸಮಿತಿಯು ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |
| 18.12 | **ಕರ್ನಾಟಕ ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘ (ರಿ.) ಬೆಂಗಳೂರು, ನಂ. 16ಕೆ, ಮಿಲ್ಲರ್ ಟ್ಯಾಂಕ್ ಬಂಡ್ ರಸ್ತೆ, ವಸಂತನಗರ, ಬೆಂಗಳೂರು–52**<br>ಸದರಿಯವರು ತಮ್ಮ ಸಂಘದ 25ನೇ ವರ್ಷದ ಸಮಾವೇಶದ ಅಂಗವಾಗಿ ಬೆಳ್ಳಿ ಹಬ್ಬವನ್ನು ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮದಲ್ಲಿ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿ, ಅದರಲ್ಲಿ ನಾಡಿನ ವಿವಿಧ ಕ್ಷೇತ್ರದ ಪರಿಣಿತರ ಲೇಖನಗಳು ಮತ್ತು ಮೂಢನಂಬಿಕೆಗಳ ಬಗ್ಗೆ ಜಾಗೃತಿ ಮೂಡಿಸುವುದು ಹಾಗೂ ಶ್ರಮಿಕ ಬಂಜಾರರ ವೈಶಿಷ್ಟತೆಯ ಲೇಖನಗಳನ್ನು ಛಾಯಾಚಿತ್ರ ಸಮೇತ ಪ್ರಕಟಿಸಿ ಪ್ರೇಕ್ಷಕರಿಗೆ ಮತ್ತು ಜಿಲ್ಲಾವಾರು ವಿತರಿಸುವುದಾಗಿ ತಿಳಿಸಿದ್ದು, ಈ ಸಂಚಿಕೆಗೆ ಮಂಡಳಿಯಿಂದ ಜಾಹೀರಾತನ್ನು ಕೋರಿ ಮನವಿ ಸಲ್ಲಿಸಿದ್ದಾರೆ. | ಜಾಹೀರಾತಿನ ದರ: ವರ್ಣರಂಜಿತ ಪೂರ್ಣ ಒಳಪುಟ ರೂ. 75,000/–, ವರ್ಣರಂಜಿತ ಒಳ ಅರ್ಧಪುಟ ರೂ. 50,000/–, ವರ್ಣರಂಜಿತ ಕಾಲುಪುಟ ರೂ. 25,000/–. | ಸಮಿತಿಯು ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |

| | | | |
|---|---|---|---|
| 18.13 | **ಬೆಂಗಳೂರು ನಗರ ಜಿಲ್ಲಾ 13ನೇ ಕನ್ನಡ ಸಾಹಿತ್ಯ ಸಮ್ಮೇಳನ, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018.**<br>ಸದರಿಯವರು ತಮ್ಮ ಸಂಸ್ಥೆ ವತಿಯಿಂದ 13ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು 2018 ರ ಮಾರ್ಚ್ 8 ಹಾಗೂ 9 ರಂದು ಬೆಂಗಳೂರು ನಗರ ಮಾಗಡಿ ಮುಖ್ಯರಸ್ತೆಯ ಬಿ.ಡಿ.ಎ. ಕೆಂಪೇಗೌಡ ಲೇಔಟ್‌ನ ಸೀಗೇಹಳ್ಳಿ ಗೇಟ್‌ಬಳಿಯ ಎಸ್.ಜಿ. ಕಲ್ಯಾಣಮಂಟಪದಲ್ಲಿ ಏರ್ಪಡಿಸಲಾಗಿದೆ. ಸಮ್ಮೇಳನದಲ್ಲಿ ಕನ್ನಡಿಗರಲ್ಲಿ ಜಾಗೃತಿ ಉಂಟುಮಾಡುವ ಹಾಗೂ ಅನ್ಯಭಾಷಿಕರಲ್ಲಿ ಕನ್ನಡದ ಬಗ್ಗೆ ಒಲವು ಮೂಡಿಸುವ ದಿಸೆಯಿಂದ ಕನ್ನಡ ಜಾಗೃತಿ ಮೆರವಣಿಗೆ, ವಿಚಾರಗೋಷ್ಠಿಗಳು, ಕವಿಗೋಷ್ಠಿ, ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ, ಬಹಿರಂಗ ಅಧಿವೇಶನ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಸಮ್ಮೇಳನದಲ್ಲಿ ಸ್ಮರಣ ಸಂಚಿಕೆಯನ್ನು ಹೊರತರುತ್ತಿದ್ದು, ಈ ಸಂಚಿಕೆಗೆ ಮಂಡಳಿಯಿಂದ ಜಾಹೀರಾತನ್ನು ಕೋರಿ ಮನವಿ ಸಲ್ಲಿಸಿದ್ದಾರೆ. | ಜಾಹೀರಾತಿನ ದರ: ಹೊರ ರಕ್ಷಾಪುಟ ರೂ. 1,00,000/–,ಒಳ ರಕ್ಷಾಪುಟ ರೂ. 50,000/–, ಪೂರ್ಣ ಪುಟ ರೂ. 25,000/–, ಅರ್ಧಪುಟ ರೂ. 15,000/–, ಪೂರ್ಣ ಪುಟ (ಕಪ್ಪು ಬಿಳುಪು) ರೂ. 10,000/–, ಅರ್ಧಪುಟ (ಕಪ್ಪು ಬಿಳುಪು) ರೂ. 5000/–. | ಸಮಿತಿಯು ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |
| 18.14 | **ವಾಯ್ಸ್ ಆಫ್ ವಿಶ್ವ, ಕನ್ನಡ ಪಾಕ್ಷಿಕ ಪತ್ರಿಕೆ, #147, ಚೆಲುವಯ್ಯ ಪಾರ್ಕ್ ಹತ್ತಿರ, ಈಸ್ಟರ್ನ್ ಎಕ್ಸ್‌ಟೆನ್ಷನ್, ಮಂಡ್ಯ ಸಿಟಿ & ಜಿಲ್ಲೆ –571401**<br>ಸದರಿಯವರು ಪತ್ರಿಕೆ ವತಿಯಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ವಿಶೇಷ ಸಂಚಿಕೆಯನ್ನು ಹೊರತರುತ್ತಿದ್ದು, ಈ ಸಂಚಿಕೆಗೆ ಮಂಡಳಿಯಿಂದ ಜಾಹೀರಾತನ್ನು ಕೋರಿ ಮನವಿ ಸಲ್ಲಿಸಿದ್ದಾರೆ. | ಜಾಹೀರಾತಿನ ದರ: ಹಿಂಬದಿಯ ಪೂರ್ಣ ಪುಟ (ವರ್ಣರಂಜಿತ) ರೂ. 30,000/–, ಒಳ ಪೂರ್ಣ ಪುಟ (ವರ್ಣರಂಜಿತ) ರೂ. 25,000/–, ಒಂದು ಪೂರ್ಣ ಪುಟ (ಕಪ್ಪು ಬಿಳುಪು) ರೂ. 20,000/–. | ಸಮಿತಿಯು ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |
| 18.15 | **ಸ್ತ್ರೀ ಜಾಗೃತಿ, ಕನ್ನಡ ಮಾಸ ಪತ್ರಿಕೆ, ಸುಮುಖ ರೆಸಿಡೆನ್ಸಿ, ನಂ. 33, 1ನೇ ಮುಖ್ಯ ರಸ್ತೆ, 3ನೇ ಅಡ್ಡರಸ್ತೆ, ಗವೀಪುರಂ ಬಡಾವಣೆ, ಬೆಂಗಳೂರು –560019**<br>ಸದರಿಯವರು ಪತ್ರಿಕೆ ವತಿಯಿಂದ ದಿನಾಂಕ: 08.3.2018 ರಂದು ಮಹಿಳಾ ದಿನಾಚರಣೆಯ ಅಂಗವಾಗಿ ವಿಶೇಷ ಸಂಚಿಕೆಯನ್ನು ಹೊರತರುತ್ತಿದ್ದು, ಈ ಸಂಚಿಕೆಯಲ್ಲಿ ವಿಭಿನ್ನ ರೀತಿಯ ಲೇಖನಗಳು, ಸಂದರ್ಶನಗಳು, ವರದಿಗಳು ಮತ್ತು ಪ್ರಸ್ತುತ ರಾಜ್ಯಾದ್ಯಂತ ನಡೆಯುತ್ತಿರುವ ಮಹಿಳೆಯರ ವಿಚಾರಗಳನನು ಪ್ರಕಟಿಸುವುದಾಗಿ ತಿಳಿಸಿದ್ದು, ಈ ಸಂಚಿಕೆಗೆ ಮಂಡಳಿಯಿಂದ ಜಾಹೀರಾತನ್ನು ಕೋರಿ ಮನವಿ ಸಲ್ಲಿಸಿದ್ದಾರೆ. | ಜಾಹೀರಾತಿನ ದರ: ನಾಲ್ಕನೇ ರಕ್ಷಾ ಪುಟ ರೂ. 60,000/– (ಮಲ್ಟಿಕಲರ್), 3ನೇ ಒಳ ರಕ್ಷಾ ಪುಟ ರೂ. 50,000/– (ಮಲ್ಟಿಕಲರ್), 2ನೇ ರಕ್ಷಾ ಪುಟ ರೂ. 45,000/– (ಮಲ್ಟಿಕಲರ್), ಪೂರ್ಣ ಒಳಪುಟ ರೂ. 25,000/– (ಮಲ್ಟಿಕಲರ್), ಪೂರ್ಣ ಒಳಪುಟ ರೂ. 15,000/–(ಕಪ್ಪು ಬಿಳುಪು), ಅರ್ಧ ಒಳಪುಟ ರೂ10,000/–. | ಸಮಿತಿಯು ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |
| 18.16 | **ಹೊಂಬಾಳೆ ಪ್ರತಿಭಾರಂಗ (ರಿ.), #655, 1ನೇ ಮಹಡಿ, 4ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ಹನುಮಂತನಗರ, ಬೆಂಗಳೂರು –560019**<br>ಸದರಿ ಸಂಸ್ಥೆಯವರು ಕನ್ನಡ ಕಾವ್ಯ, ಸಂಗೀತ ಮತ್ತು ಸಾಂಸ್ಕೃತಿಕ ಲೋಕದಲ್ಲಿ ಹೆಜ್ಜೆಗುರುತು ಎನಿಸಿರುವ 'ಕವಿದನಿ'ಯ ಕಲಾಪಯಣವನ್ನು 150 ಪುಟಗಳ 'ಕವಿದನಿ ದರ್ಪಣ' ಎಂಬ ಸ್ಮರಣ ಸಂಚಿಕೆಯ ರೂಪದಲ್ಲಿ ಹೊರತರುತ್ತಿದ್ದು, ಈ ಸಂಚಿಕೆಗೆ ಮಂಡಳಿಯಿಂದ ಜಾಹೀರಾತನ್ನು ಕೋರಿ ಮನವಿ ಸಲ್ಲಿಸಿದ್ದಾರೆ. | ಜಾಹೀರಾತಿನ ದರ: ಹಿಂಬದಿ ರಕ್ಷಾ ಪುಟ (ವರ್ಣ) ರೂ. 30,000/–, ಒಳ ರಕ್ಷಾ ಪುಟ (ವರ್ಣ) ರೂ. 20,000/–, ಒಳಪುಟ ಒಂದಕ್ಕೆ ರೂ. 15,000/–, ಅರ್ಧ ಪುಟಕ್ಕೆ ರೂ. 8,000/–, ಕಾಲು ಪುಟಕ್ಕೆ ರೂ. 4,000/–. | ಸಮಿತಿಯು ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |
| 18.17 | **ಅಖಿಲ ಕರ್ನಾಟಕ ಮಹಮ್ಮದೀಯರ ಕನ್ನಡ ವೇದಿಕೆ (ರಿ.), ಅಭಿಮಾನ, 501, 1ನೇ 'ಸಿ' ಮುಖ್ಯರಸ್ತೆ, ಮತ್ತಿಕೆರೆ, ಬೆಂಗಳೂರು –560054.**<br>ಸದರಿ ವೇದಿಕೆಯವರು ಕಳೆದ ವರ್ಷಗಳಲ್ಲಿ ನಡೆಸಿದ ಕರ್ನಾಟಕ ಸಾಂಸ್ಕೃತಿಕ, ಸಾಮಾಜಿಕ ಅಭಿವೃದ್ಧಿಯಲ್ಲಿ ಮುಸ್ಲಿಮರ ಪಾತ್ರ ಕುರಿತು ನಾಡಿನ ಸಾಹಿತಿಗಳು ಮಂಡಿಸಿದ ವಿಚಾರಗಳನ್ನು ಬಹುವರ್ಣದ ರಕ್ಷಾಪುಟದ ಸ್ಮರಣ ಸಂಚಿಕೆಯನ್ನು "ಭಾವೈಕ್ಯ ಸಂಪದ" 2018ನ್ನು | ಜಾಹೀರಾತಿನ ದರ: ಹೊರ ರಕ್ಷಾ ಪುಟ ರೂ. 2,00,000/–, ಒಳ ರಕ್ಷಾ ಪುಟ ರೂ. 1,00,000/–, ವಿಶೇಷ ಪುಟ ರೂ. 50,000/–, ಪೂರ್ಣ ಪುಟ | ಸಮಿತಿಯು ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |

| | | | |
|---|---|---|---|
| | ಮಾರ್ಚ್ ತಿಂಗಳಲ್ಲಿ ಹೊರತರುತ್ತಿದ್ದು, ಈ ಸಂಚಿಕೆಗೆ ಮಂಡಳಿಯಿಂದ ಜಾಹೀರಾತನ್ನು ಕೋರಿ ಮನವಿ ಸಲ್ಲಿಸಿದ್ದಾರೆ. ಇದಕ್ಕೆ **ಶ್ರೀ ಆರ್. ರೋಷನ್ ಬೇಗ್, ನಗರಾಭಿವೃದ್ಧಿ ಮತ್ತು ಹಜ್ ಸಚಿವರು, ಇವರು ಮಂಡಳಿ ವತಿಯಿಂದ ಹೊರಪುಟದ ಜಾಹಿರಾತಿಗಾಗಿ ರೂ. 2,00,000/-ಗಳನ್ನು ನೀಡಿ ಪ್ರೋತ್ಸಾಹಿಸಬೇಕೆಂದು ಕೋರಿರುತ್ತಾರೆ.** | (ವರ್ಣದಲ್ಲಿ) ರೂ. 30,000/-, ಪೂರ್ಣ ಪುಟ ರೂ. 25,000/-. | |
| 18.18 | **ವಿಜಯವಾಣಿ, ಕನ್ನಡ ದಿನ ಪತ್ರಿಕೆ, ನಂ. 24, 1 & 3ನೇ ಮಹಡಿ, ಶ್ರೀ ಸಾಯಿರಾಮ್ ಟವರ್, 5ನೇ ಮೈನ್, ಕೆ.ಪಿ. ಪುಟ್ಟಣ್ಣ ಚೆಟ್ಟಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018.**<br>ಸದರಿ ಪತ್ರಿಕೆಯವರು, ಪತ್ರಿಕೆ ವತಿಯಿಂದ ಯುಗಾದಿ ಹಬ್ಬದ ಪ್ರಯುಕ್ತ 18 ಮಾರ್ಚ್ 2018ರಂದು ವಿಶೇಷ ಸಂಚಿಕೆಯನ್ನು ಹೊರತರುತ್ತಿದ್ದು, ಈ ಸಂಚಿಕೆಗೆ ಮಂಡಳಿಯಿಂದ ಜಾಹೀರಾತನ್ನು ಕೋರಿ ಮನವಿ ಸಲ್ಲಿಸಿದ್ದಾರೆ. | ಜಾಹೀರಾತಿನ ದರ: ವರ್ಣರಂಜಿತ ಪೂರ್ಣ ಪುಟ ರೂ. 60,000/- | ಸಮಿತಿಯು ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |
| 18.19 | **ಸಿಡಿಲು, ಕನ್ನಡ ರಾಷ್ಟ್ರೀಯ ಮಾಸ ಪತ್ರಿಕೆ, ನಂ. 1447, 17ನೇ ಕ್ರಾಸ್, ಕುಮಾರಸ್ವಾಮಿ ಲೇಔಟ್, 1ನೇ ಹಂತ, ಜೆ.ಪಿ. ನಗರ ಪೋಸ್ಟ್, ಬೆಂಗಳೂರು-560078**<br>ಸದರಿ ಪತ್ರಿಕೆಯವರು ಪತ್ರಿಕೆ ವತಿಯಿಂದ ವಿಶೇಷ ಸಂಚಿಕೆಯನ್ನು ಹೊರತರುತ್ತಿದ್ದು, ಈ ಸಂಚಿಕೆಗೆ ಮಂಡಳಿಯಿಂದ ಜಾಹೀರಾತನ್ನು ಕೋರಿ ಮನವಿ ಸಲ್ಲಿಸಿದ್ದಾರೆ. ಸದರಿ ಮನವಿ ಪತ್ರದ ಮೇಲೆ ಮಾನ್ಯ **ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರ ಕಛೇರಿಯಿಂದ ಪತ್ರಿಕೆಗೆ ಮಂಡಳಿಯಿಂದ ಕಪ್ಪು ಬಿಳುಪು ಅರ್ಧ ಪುಟ ಜಾಹೀರಾತನ್ನು ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಟಿಪ್ಪಣಿಸಿ ನಿರ್ದೇಶಿಸಿರುತ್ತಾರೆ.** | ಜಾಹೀರಾತಿನ ದರ: ವರ್ಣರಂಜಿತ ಕೊನೆ ಒಂದು ಪುಟ ರೂ. 75,000/-, ವರ್ಣರಂಜಿತ ಒಳ ಒಂದು ಪುಟ ರೂ. 50,000/-, ಕಪ್ಪು - ಬಿಳುಪು ಒಳ ಪುಟಗಳಿಗೆ ರೂ. 25,000/- . | ಸಮಿತಿಯು ಸಿಡಿಲು, ಕನ್ನಡ ರಾಷ್ಟ್ರೀಯ ಮಾಸ ಪತ್ರಿಕೆ, ಬೆಂಗಳೂರುರವರಿಗೆ ವಿಶೇಷ ಸಂಚಿಕೆ ಜಾಹೀರಾತಿಗೆ ರೂ. 10,000/-ಗಳನ್ನು ನೀಡಲು ಶಿಫಾರಸ್ಸು ಮಾಡಿತು. |
| 18.20 | **ತರಂಗ, ಕನ್ನಡ ವಾರ ಪತ್ರಿಕೆ, ನಂ. 15 ಬೇಸ್‌ಮೆಂಟ್, ಮಣಿಪಾಲ್ ಸೆಂಟರ್, ಡಿಕೆನ್‌ಸನ್‌ರಸ್ತೆ, ಬೆಂಗಳೂರು-560042.**<br>ಸದರಿಯವರು ತಮ್ಮ ಪತ್ರಿಕೆ ವತಿಯಿಂದ ಯುಗಾದಿ ಹಬ್ಬದ ಪ್ರಯುಕ್ತ 'ತರಂಗ ಯುಗಾದಿ ವಿಶೇಷ -2018' ಅನ್ನು ಹೊರತರುತ್ತಿದ್ದು, ಈ ಸಂಚಿಕೆಗೆ ಮಂಡಳಿಯಿಂದ ಜಾಹೀರಾತನ್ನು ಕೋರಿ ಮನವಿ ಸಲ್ಲಿಸಿದ್ದಾರೆ. | ಜಾಹೀರಾತಿನ ದರ: ಪೂರ್ಣ ಪುಟ SNP ರೂ. 45,000/-, ಪೂರ್ಣ ಪುಟ Glaze ರೂ. 50,000/-, ಪೂರ್ಣ ಪುಟ Double Spread ರೂ. 80,000/-, | ಸಮಿತಿಯು ತರಂಗ, ಕನ್ನಡ ವಾರ ಪತ್ರಿಕೆ, ಬೆಂಗಳೂರುರವರಿಗೆ ವಿಶೇಷ ಸಂಚಿಕೆ ಜಾಹೀರಾತಿಗೆ ರೂ. 50,000/-ಗಳನ್ನು ನೀಡಲು ಶಿಫಾರಸ್ಸು ಮಾಡಿತು. |
| 18.21 | **ಸೂರ್ಯ ಕಿರಣ, ಮಾಸಿಕ ಪತ್ರಿಕೆ, ನಂ 16/ಎ, ಅಶ್ವತ್ಥಪ್ಪ ಲೇಔಟ್, ಮುನೇಶ್ವರ ಲೇಔಟ್, 11ನೇ ಕ್ರಾಸ್, ಅತ್ತೂರು, ಯಲಹಂಕ, ಬೆಂಗಳೂರು-560064**<br>ಸದರಿಯವರು ತಮ್ಮ ಪತ್ರಿಕೆ ವತಿಯಿಂದ 11ನೇ ವರ್ಷದ 'ಯುಗಾದಿ ವಿಶೇಷಾಂಕ' ಸಂಚಿಕೆಯನ್ನು ಹೊರತರುತ್ತಿದ್ದು, ಈ ಸಂಚಿಕೆಗೆ ಮಂಡಳಿಯಿಂದ ಜಾಹೀರಾತನ್ನು ಕೋರಿ ಮನವಿ ಸಲ್ಲಿಸಿದ್ದಾರೆ. | ಜಾಹೀರಾತಿನ ದರ: ಕಾಲು ಪುಟ ಕಪ್ಪು ಬಿಳುಪು ರೂ 10,000/-, ಅರ್ಧ ಪುಟ ಕಪ್ಪು ಬಿಳುಪು ರೂ 20,000/-, ಪೂರ್ತಿ ಪುಟ ಕಪ್ಪು ಬಿಳುಪು ರೂ 40,000/-, ಅರ್ಧ ಪುಟ ಕಲರ್ ರೂ 40,000/-, ಪೂರ್ತಿ ಪುಟ ಕಲರ್ ರೂ 55,000/-, | ಸಮಿತಿಯು ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |
| 18.22 | **ಅಖಿಲ ಕರ್ನಾಟಕ ರಾಜ್ಯ ಪತ್ರಕರ್ತರ ಸಂಘ (ರಿ), ನಂ. 35, 1ನೇ ಮುಖ್ಯ ರಸ್ತೆ, ಟಿ. ದಾಸರಹಳ್ಳಿ ಪೋಸ್ಟ್, ಮಲ್ಲಸಂದ್ರ, ಬೆಂಗಳೂರು-560057**<br>ಸದರಿಯವರು ಸಂಘದ ವತಿಯಿಂದ ರಾಜ್ಯ ಮಟ್ಟದ ಪತ್ರಕರ್ತರ ಸಮಾವೇಶವನ್ನು ಏರ್ಪಡಿಸಿದ್ದು, ಈ ಕಾರ್ಯಕ್ರಮದಲ್ಲಿ ನಾಡಿಗೆ ಸೇವೆ ಸಲ್ಲಿಸಿದ ಗಣ್ಯಾತಿಗಣ್ಯರು, ಕಲಾವಿದರು, ಸಮಾಜ ಸೇವಕರು ಹಾಗೂ ಪತ್ರಕರ್ತರನ್ನು ಗುರುತಿಸಿ ಗೌರವಿಸಲಾಗುವುದು. ಸದರಿ ಸಮಾವೇಶಕ್ಕೆ | ಜಾಹೀರಾತಿನ ದರ: ರಕ್ಷಾ ಪುಟ ಬಹುವರ್ಣ ರೂ 75,000/-, ರಕ್ಷಾ ಒಳಪುಟ ಬಹುವರ್ಣ ರೂ 70,000/-, ಪೂರ್ಣ ಪುಟ ಬಹುವರ್ಣ ರೂ 60,000/-, ಪೂರ್ಣ ಪುಟ | ಸಮಿತಿಯು ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |

| | | | |
|---|---|---|---|
| | ಮಠಾಧೀಶರು, ರಾಜಕೀಯ ಮುಖಂಡರು, ಸಾಹಿತಿಗಳು, ಅಧಿಕಾರಿಗಳು, ಸಮಾಜ ಸೇವಕರು ಹಾಗೂ ಸಂಘ ಸಂಸ್ಥೆಗಳ ಮುಖಂಡರು, ಕನ್ನಡದ ಹಿತಚಿಂತಕರು ಭಾಗವಹಿಸುವುದಾಗಿ ತಿಳಿಸಿದ್ದು, ಇದೇ ಸಂದರ್ಭದಲ್ಲಿ "ಅಖಿಲ ಕರ್ನಾಟಕ ರಾಜ್ಯ ಪತ್ರಕರ್ತರ ಸಂಘದ ಸ್ಮರಣ ಸಂಚಿಕೆ" ಯನ್ನು ಹೊರತರುತ್ತಿದ್ದು, ಈ ಸಂಚಿಕೆಗೆ ಮಂಡಳಿಯಿಂದ ಜಾಹೀರಾತನ್ನು ಕೋರಿ ಮನವಿ ಸಲ್ಲಿಸಿದ್ದಾರೆ. | ಬಹುವರ್ಣ (ಒಳಪುಟ) ರೂ 50,000/-. | |
| 18.23 | **SME India Times, ಇಂಗ್ಲೀಷ್ ಮಾಸ ಪತ್ರಿಕೆ, ನಂ. 1291/7, 6ನೇ ಮುಖ್ಯ ರಸ್ತೆ, 4ನೇ ಕ್ರಾಸ್, ಪ್ರಕಾಶ್‌ನಗರ, ಬೆಂಗಳೂರು-560021**<br>ಸದರಿಯವರ ಪತ್ರಿಕೆಯು ವಿಶೇಷವಾಗಿ ಸಣ್ಣ ಮತ್ತು ಮಧ್ಯಮ ವಲಯಗಳ ಕೈಗಾರಿಕೆಗಳ ಅಭಿವೃದ್ಧಿಗೆ ಮೀಸಲಾದ ಪತ್ರಿಕೆಯಾಗಿದ್ದು, ಕೈಗಾರಿಕಾ ಬೆಳವಣಿಗೆಗಳ ಬಗ್ಗೆ ವಿಶೇಷ ಗಮನವನ್ನು ನೀಡುವುದು ಮುಖ್ಯ ಉದ್ದೇಶವಾಗಿರುತ್ತದೆ. ಆದುದರಿಂದ ಸದರಿ ಪತ್ರಿಕೆಗೆ ಮಂಡಳಿಯಿಂದ ಕೈಗಾರಿಕೆಗಳಿಗೆ ಸಂಬಂಧಿಸಿದ ತಾಂತ್ರಿಕ ಮಾಹಿತಿ ಮತ್ತು ಜಾಹೀರಾತುಗಳನ್ನು ಕೋರಿ ಮನವಿ ಸಲ್ಲಿಸಿದ್ದಾರೆ. | ಜಾಹೀರಾತಿನ ದರ: ಹಿಂಬದಿ ರಕ್ಷಾಪುಟ (ಕಲರ್) ರೂ. 1,00,000/-, ಒಳಪುಟ (ಕಲರ್) ರೂ. 90,000/-. | ಸಮಿತಿಯು ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |
| 18.24 | **ಕರ್ನಾಟಕ ಕೃಷಿ ಪ್ರಾಂತ ಕೂಲಿಕಾರರ ಸಂಘ, ಮಂಡ್ಯ ಜಿಲ್ಲಾ ಸಮಿತಿ, ಎ.ಎಸ್. ಚಂದ್ರು ಬಿಲ್ಡಿಂಗ್, ಪೋಲಿಸ್ ಠಾಣೆ ಮುಂಭಾಗಮ ಭಾರತೀನಗರ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ -571 422.**<br>ಸದರಿ ಸಂಘದ ಜಿಲ್ಲಾ ಸಮಿತಿಯು ಕೃಷಿ ಕೂಲಿಕಾರರ 4ನೇ ಜಿಲ್ಲಾ ಸಮ್ಮೇಳನವನ್ನು 14 & 15 ಏಪ್ರಿಲ್ 2018 ರಂದು ಆಯೋಜಿಸಿದ್ದು, ಈ ಸಮ್ಮೇಳನದಲ್ಲಿ ಕೃಷಿ ಕೂಲಿಕಾರರ ಮತ್ತು ವಿವಿಧ ಜನ ವಿಭಾಗಗಳ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು "ಉದ್ಯೋಗ ಖಾತ್ರಿ ಜಾರಿಯಲ್ಲಿನ ಸಮಸ್ಯೆಗಳು ಹಾಗೂ ಮನೆ ನಿವೇಶನಗಳ ಬಗ್ಗೆ" ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ನಡೆಸುವುದಾಗಿ ತಿಳಿಸಿರುತ್ತಾರೆ. ಜಿಲ್ಲಾ ಸಮ್ಮೇಳನದ ಕಾರ್ಯಕಲಾಪಗಳು ಮತ್ತು ವಿಚಾರ ಸಂಕಿರಣದ ವಿಷಯಗಳು ಹಾಗೂ ತಜ್ಞರ ಲೇಖನಗಳನ್ನು ಒಳಗೊಂಡ ಒಂದು ಸ್ಮರಣ ಸಂಚಿಕೆಯನ್ನು ಹೊರತರುತ್ತಿದ್ದು, ಈ ಸಂಚಿಕೆಗೆ ಮಂಡಳಿಯಿಂದ ಜಾಹೀರಾತನ್ನು ಕೋರಿ ಮನವಿ ಸಲ್ಲಿಸಿದ್ದಾರೆ. ಇದಕ್ಕೆ **ಶ್ರೀ ದಿನೇಶ್ ಅಮಿನ್ ಮಟ್ಟು, ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರರು, ಇವರು ಮಂಡಳಿ ವತಿಯಿಂದ ಸ್ಮರಣ ಸಂಚಿಕೆಗೆ ಜಾಹೀರಾತು ನೀಡಲು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಕೋರಿರುತ್ತಾರೆ.** | ಜಾಹೀರಾತಿನ ದರ: ಹಿಂಬದಿ ರಕ್ಷಾಪುಟ ರೂ. 50,000/-, ಮುಂಬದಿ ಒಳ ರಕ್ಷಾಪುಟ ರೂ. 40,000/-, ಹಿಂಬದಿ ಒಳ ರಕ್ಷಾಪುಟ ರೂ. 30,000/-, ವಿಶೇಷ ಪುಟ (ಬಹುವರ್ಣ) ರೂ. 25,000/-, ಪೂರ್ಣ ಪುಟ (ಕಪ್ಪು ಬಿಳಿಪು) ರೂ. 10,000/-. | ಸಮಿತಿಯು ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |
| 18.25 | **ಲೋಕ ವೀರಶೈವ, ಕನ್ನಡ ಮಾಸ ಪತ್ರಿಕೆ, ಕೇ/ಆಫ್ ಕಾಶೀನಾಥ್, ನಂ 22, 2ನೇ ಮಹಡಿ, ಆಂಜನಪ್ಪ ಲೇಔಟ್, ಬಿ.ಸಿ.ಸಿ ಲೇಔಟ್, 3ನೇ ಕ್ರಾಸ್, ಅತ್ತಿಗುಪ್ಪೆ, ಬೆಂಗಳೂರು-560040**<br>ಸದರಿಯವರು ತಮ್ಮ ಪತ್ರಿಕೆ ವತಿಯಲ್ಲಿ ಆಗಸ್ಟ್-20 – ಸೆಪ್ಟೆಂಬರ್ 20, 2017ರ ಸಂಚಿಕೆಯಲ್ಲಿ ಗಣೇಶ ಹಬ್ಬದ ಸಂದರ್ಭದಲ್ಲಿ "ಮಣ್ಣಿನ ಗಣಪತಿ ವಿಗ್ರಹ ಪೂಜಿಸಿ" ರಾಸಾಯನಿಕ ತ್ಯಾಜ್ಯ ಮಾಲಿನ್ಯ ತಡೆಗಟ್ಟುವ ಕುರಿತು ಮಂಡಳಿಯಿಂದ ಅನುಮೋದನೆ ಪಡೆಯದೆ ಜಾಹೀರಾತನ್ನು ಪ್ರಕಟಿಸಿದ್ದು, ಸದರಿ ಜಾಹೀರಾತಿನ ಮೊತ್ತ ರೂ. 25,000/-ಗಳ ಬಿಲ್ಲನ್ನು ಮಂಡಳಿಗೆ ಸಲ್ಲಿಸಿ, ಜಾಹೀರಾತಿನ ಮೊತ್ತವನ್ನು ಮಂಡಳಿಯಿಂದ ಮಂಜೂರು ಮಾಡುವಂತೆ ಕೋರಿ ಬಿಲ್ಲನ್ನು ಸಲ್ಲಿಸಿದ್ದಾರೆ. | ಜಾಹೀರಾತಿನ ದರ: ರೂ. 25,000/- ಗಳು. | ಸಮಿತಿಯು ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |
| 18.26 | **ಹ್ಯೂಮನ್ ರೈಟ್ಸ್ ಅಂಡ್ ಎನ್ವಿರಾನ್‌ಮೆಂಟ್ ಕಮಿಟಿ (ರಿ), ನಂ. 10, ಸಿದ್ದಪ್ಪಾಜಿ ನಿಲಯ, 9ನೇ ಮುಖ್ಯ ರಸ್ತೆ, 9ನೇ 'ಸಿ' ಕ್ರಾಸ್, ಅಗ್ರಹಾರ ದಾಸರಹಳ್ಳಿ, ಬೆಂಗಳೂರು -79**<br>ಸದರಿ ಸಂಸ್ಥೆಯವರು ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ತಮ್ಮ 'ದಿ ನೇಚರ್' ಪತ್ರಿಕೆ ವತಿಯಿಂದ ವಿಶೇಷ ಸಂಚಿಕೆಯನ್ನು ಹೊರತರುತ್ತಿದ್ದು, ಈ ಸಂಚಿಕೆಗೆ ಮಂಡಳಿಯಿಂದ ಜಾಹೀರಾತನ್ನು ಕೋರಿ ಮನವಿ | ಜಾಹೀರಾತಿನ ದರ: ಪತ್ರಿಕೆಯ ಹಿಂಬದಿಯ ಪುಟ ರೂ. 60,000/-, ಪತ್ರಿಕೆಯ ಒಳಪುಟ ರೂ. 30,000/-, ಹಿಂಬದಿಯ ಪೂರ್ತಿ ಪುಟ ರೂ. 40,000/-. | ಸಮಿತಿಯು ಹ್ಯೂಮನ್ ರೈಟ್ಸ್ ಅಂಡ್ ಎನ್ವಿರಾನ್‌ಮೆಂಟ್ ಕಮಿಟಿ (ರಿ), ಬೆಂಗಳೂರುರವರಿಗೆ |

| | | | |
|---|---|---|---|
| | ಸಲ್ಲಿಸಿದ್ದಾರೆ. | | 'ದಿ ನೇಚರ್' ಪತ್ರಿಕೆಯ ವಿಶೇಷ ಸಂಚಿಕೆ ಜಾಹೀರಾತಿಗೆ ರೂ. 15,000/-ಗಳನ್ನು ನೀಡಲು ಶಿಫಾರಸ್ಸು ಮಾಡಿತು. |
| 18.27 | **ವೀರಶೈವ, ಕನ್ನಡ ಮಾಸ ಪತ್ರಿಕೆ, ನಂ. 22, 3ನೇ ಮಹಡಿ, ಆಂಜನಪ್ಪ ಬಡಾವಣೆ, ಬಿ.ಸಿ.ಸಿ. ಲೇಔಟ್, 3ನೇ ಅಡ್ಡರಸ್ತೆ, ಅತ್ತಿಗುಪ್ಪೆ, ಬೆಂಗಳೂರು**<br>ಸದರಿ ಸಂಸ್ಥೆಯವರು ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ತಮ್ಮ ಪತ್ರಿಕೆ ವತಿಯಿಂದ ವಿಶೇಷ ಸಂಚಿಕೆಯನ್ನು ಹೊರತರುತ್ತಿದ್ದು, ಈ ಸಂಚಿಕೆಗೆ ಮಂಡಳಿಯಿಂದ ಜಾಹೀರಾತನ್ನು ಕೋರಿ ಮನವಿ ಸಲ್ಲಿಸಿದ್ದಾರೆ. | ಜಾಹೀರಾತಿನ ದರ: ಪತ್ರಿಕೆಯ ಮುಖಪಟದ ಕೊನೆಯ ಪುಟ ರೂ. 25,000/-, ಮುಖಪಟದ ಹಿಂಪುಟ ರೂ. 15,000/-, ಒಳಪುಟಗಳಲ್ಲಿ (ಪೂರ್ಣ ಪುಟ) ರೂ. 10,000/-, ಒಳಪುಟಗಳಲ್ಲಿ (ಅರ್ಧ ಪುಟ) ರೂ. 5,000/-. | ಸಮಿತಿಯು ವೀರಶೈವ, ಕನ್ನಡ ಮಾಸ ಪತ್ರಿಕೆ, ಬೆಂಗಳೂರುರವರಿಗೆ ವಿಶೇಷ ಸಂಚಿಕೆ ಜಾಹೀರಾತಿಗೆ ರೂ. 15,000/-ಗಳನ್ನು ನೀಡಲು ಶಿಫಾರಸ್ಸು ಮಾಡಿತು. |
| 18.28 | **National Pollution Control & Environment Conversation Committee, No. 700/813, 1st 'C' Main, Girinagar, 2nd Stage, Bangalore**<br>ಸದರಿ ಸಂಸ್ಥೆಯವರು ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ತಮ್ಮ ಪತ್ರಿಕೆ ವತಿಯಿಂದ ವಿಶೇಷ ಸಂಚಿಕೆಯನ್ನು ಹೊರತರುತ್ತಿದ್ದು, ಈ ಸಂಚಿಕೆಗೆ ಮಂಡಳಿಯಿಂದ ಜಾಹೀರಾತನ್ನು ಕೋರಿ ಮನವಿ ಸಲ್ಲಿಸಿದ್ದಾರೆ. | ಜಾಹೀರಾತಿನ ದರ: ಪತ್ರಿಕೆಯ Back Cover Page (Four Color) ರೂ. 1,95,000/-, Back Cover Page (Four Color) (Both front & back) ರೂ. 1,50,000/-, Full Page (Four Color) ರೂ. 1,23,000/-, One third Page (Four Color) ರೂ. 96,000/-, Half Page (Four Color) ರೂ. 87,000/-, Quarter Page (Four Color) ರೂ. 78,000/-, Best Compliments ರೂ. 60,000/-, | ಸಮಿತಿಯು National Pollution Control & Environment Conversation Committee, ಬೆಂಗಳೂರುರವರಿಗೆ ವಿಶೇಷ ಸಂಚಿಕೆ ಜಾಹೀರಾತಿಗೆ ರೂ. 50,000/-ಗಳನ್ನು ನೀಡಲು ಶಿಫಾರಸ್ಸು ಮಾಡಿತು. |
| 18.29 | **ಪಿಳಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ, ಮಂಗಳೂರು**<br>ವಿಶ್ವ ಪರಿಸರ ದಿನಾಚರಣೆ -2018ರ ಪ್ರಯುಕ್ತ ನಿಸರ್ಗಧಾಮದಲ್ಲಿ ಶಾಲಾ ಮಕ್ಕಳಿಗೆ ಮತ್ತು ಸಾರ್ವಜನಿಕರಿಗೆ ಪರಿಸರ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸಲು ಮಂಡಳಿಯಿಂದ ಪ್ರಾಯೋಜಕತ್ವ ನೀಡುವ ಬಗ್ಗೆ | ಆರ್ಥಿಕ ಸಹಾಯ ಕೋರಿ | ಸಮಿತಿಯು ಪಿಳಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ, ಮಂಗಳೂರು ರವರಿಗೆ ಪರಿಸರ ಜಾಗೃತಿ ಕಾರ್ಯಕ್ರಮಕ್ಕೆ ರೂ. 25,000/-ಗಳನ್ನು ನೀಡಲು ಶಿಫಾರಸ್ಸು ಮಾಡಿತು |

**ಅಧ್ಯಕ್ಷರು ಸಮಿತಿ ಸಭೆಯ ಸದಸ್ಯರಿಗೆ ಮತ್ತು ಇತರೆ ಆಹ್ವಾನಿತರಿಗೆ ವಂದಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.**

**ಶ್ರೀ ಪಿಯುಸ್.ಎಲ್. ರೋಡ್ರಿಗಸ್,**
**ಅಧ್ಯಕ್ಷರು, ಜಾಗೃತಿ ಸಮಿತಿ,**